**ಕರ್ನಾಟಕ ವಿಧಾನ ಪರಿಷತ್ತು**

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 846
2. ಮಾನ್ಯ ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 19.08.2025
4. ಉತ್ತರಿಸುವ ಸಚಿವರು : ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | 2024-25ರ ಆಯವ್ಯಯದಲ್ಲಿ ಘೋಷಿಸಿದಂತೆ, ಮಂಡ್ಯದ ಮೈಷುಗರ್ ಕಾರ್ಖಾನೆಯ ಆವರಣದಲ್ಲಿ ಹೊಸ ಸಕ್ಕರೆ ಕಾರ್ಖಾನೆ ನಿರ್ಮಾಣ ಮಾಡಲು ಸ್ಥಳ ಗುರುತಿಸಲಾಗಿದೆಯೇ; ವಿಸ್ತೀರ್ಣ ಹಾಗೂ ಯೋಜನಾ ಅಂದಾಜು ವೆಚ್ಚ ಎಷ್ಟು; (ವಿವರ ನೀಡುವುದು) | ಮಂಡ್ಯದ ಮೈಸೂರು ಸಕ್ಕರೆ ಕಾರ್ಖಾನೆಯ ಆವರಣದಲ್ಲಿ ಹೊಸ ಸಕ್ಕರೆ ಕಾರ್ಖಾನೆಯನ್ನು ನಿರ್ಮಿಸಲು ಹಾಗೂ ಸರ್ಕಾರದ ಅನುದಾನ, ಇತರೆ ಮೂಲಗಳು ಹಾಗೂ ಕಾರ್ಖಾನೆಯ Asset Monetisation ಮೂಲಕ ಸಂಪನ್ಮೂಲವನ್ನು ಕ್ರೋಢೀಕರಿಸುವುದು ಎಂದು 2024-25ನೇ ಸಾಲಿನ ಆಯವ್ಯಯ ಘೋಷಣಾ ಖಂಡಿಕೆ:327ರಲ್ಲಿ ಘೋಷಿಸಲಾಗಿರುತ್ತದೆ.<br>ಸದರಿ ಘೋಷಣೆಯ ಅನುಷ್ಠಾನದ ಸಂಬಂಧ ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ ಬೆಳಗಾವಿ – ಈ ಸಂಸ್ಥೆಯಿಂದ ವಿಸ್ತೃತ ಯೋಜನಾ ವರದಿಯನ್ನು ಪಡೆಯಲಾಗಿದೆ. ಸದರಿ ವರದಿಯಲ್ಲಿ ಈ ಕೆಳಕಂಡ ಅಂಶಗಳ ಕುರಿತು ಪ್ರಸ್ತಾಪಿಸಲಾಗಿರುತ್ತದೆ.<br>**Part – A:-** ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಪ್ರಸ್ತುತ ಇರುವ 5,000 ಟಿ.ಸಿ.ಡಿ ಸಾಮರ್ಥ್ಯದ ಸಕ್ಕರೆ ಸಂಸ್ಕರಣಾ ಘಟಕಗಳು / ಬಾಯ್ಲಿಂಗ್ ಹೌಸ್‌ನ ಬಹಳಷ್ಟು ಘಟಕಗಳು ಹಳೆಯ ತಂತ್ರಜ್ಞಾನವನ್ನು ಹೊಂದಿರುವುದರಿಂದ ಮತ್ತು ಕೆಲವು ಕೆಟ್ಟಿರುವುದರಿಂದ ಎಲೆಕ್ಟ್ರಿಕಲ್ ಮೋಟಾರ್ ಹೆಚ್.ಪಿ. ಅಪ್ ಗ್ರೇಡ್ ಮಾಡುವ ಪ್ರಕ್ರಿಯೆ ಹೊರತುಪಡಿಸಿ 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರಗಳನ್ನು ಅಳವಡಿಸುವುದು ಸೂಕ್ತವಾಗಿರುತ್ತದೆ ಎಂದು ಸದರಿ ಯಂತ್ರೋಪಕರಣಗಳ ಅಳವಡಿಕೆಯ ಒಟ್ಟಾರೆ ಅಂದಾಜು ವೆಚ್ಚ ರೂ.59.80 ಕೋಟಿಗಳಾಗುತ್ತವೆ ಎಂದು ವರದಿಸಿರುತ್ತಾರೆ.<br>**Part – B:-** 5,000 ಟಿ.ಸಿ.ಡಿ ಹೊಸ ಘಟಕದ ಸ್ಥಾಪನೆಯೊಂದಿಗೆ 100 TPH, 67kg/cut pressur ನ ಹೊಸ ಬಾಯ್ಲರ್‌ನ ಹಾಗೂ ಪ್ರಸ್ತುತ ಇರುವ ಒಂದು ಬಾಯ್ಲರ್ ರಿಪೇರಿ ನಿರ್ವಹಣೆ ಮಾಡಲು ಒಟ್ಟಾರೆ ಯೋಜನಾ ವೆಚ್ಚ ಮತ್ತು Pre-operative ವೆಚ್ಚವನ್ನು ಸೇರಿ ಅಂದಾಜು ರೂ.288.00 ಕೋಟಿಗಳಾಗುತ್ತದೆ ಎಂದು ಹಾಗೂ ಮುಂದಿನ ಹಂಗಾಮುಗಳಲ್ಲಿ ಕಬ್ಬಿನ ಲಭ್ಯತೆಯನ್ನು ಪರಿಗಣಿಸಿ ಈ ಯೋಜನೆಯನ್ನು ಅನುಷ್ಠಾನ ಮಾಡುವ ಕುರಿತು ಪರಿಶೀಲಿಸಬಹುದಾಗಿದೆ ಎಂದು ವರದಿಸಿರುತ್ತಾರೆ.<br>**Part – C:-** ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ 80 ಕೆ.ಎಲ್.ಪಿ.ಡಿ ಸಾಮರ್ಥ್ಯದ ಕಾಕಂಬಿ ಆಧಾರಿತ ಎಥೆನಾಲ್ ಘಟಕವನ್ನು ಅಳವಡಿಸುವುದಾಗಿ ಹಾಗೂ ಸದರಿ ಸಾಮರ್ಥ್ಯದ ಘಟಕದಲ್ಲಿ ಜ್ಯೂಸ್ ಬಳಕೆ ಮಾಡಿದಲ್ಲಿ 120 ಕೆ.ಎಲ್.ಪಿ.ಡಿ ಉತ್ಪಾದನೆಗೆ ಹೊಂದಾಣಿಕೆಯಾಗುತ್ತದೆ ಎಂದು ಈ ಘಟಕದ ಸ್ಥಾಪನೆಗೆ ಅಂದಾಜು ವೆಚ್ಚ ರೂ.116.00 ಕೋಟಿಗಳಾಗಿರುತ್ತದೆ ಎಂದು ವರದಿಸಿರುತ್ತಾರೆ.<br>ಮೇಲ್ಕಂಡ ವಿಸ್ತೃತ ಯೋಜನಾ ವರದಿಯ ಹಿನ್ನೆಲೆಯಲ್ಲಿ ದಿನಾಂಕ:20.11.2024ರಂದು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ. |

| | | |
|---|---|---|
| | | 1. ಪರಿಷ್ಕೃತ ವಿಸ್ತೃತ ಯೋಜನಾ ವರದಿಯಲ್ಲಿನ Part – A ಮತ್ತು Part-C ಗಳನ್ನು ಮಾತ್ರ ಪ್ರಸ್ತುತ ಸಾಲಿನಲ್ಲಿ ಅನುಷ್ಠಾನಗೊಳಿಸುವ ಸಂಬಂಧ, ಎಲೆಕ್ಟ್ರಿಕಲ್ ಮೋಟಾರ್ ಹೆಚ್.ಪಿ. ಅಪ್‌ಗ್ರೇಡ್ ಮಾಡುವ ಪ್ರಕ್ರಿಯೆ ಹೊರತುಪಡಿಸಿ 5,000 ಟಿ.ಸಿ.ಡಿ ಕಬ್ಬು ನುರಿಸಲು ಸ್ಪಂದಿಸುವ ಹೊಸ ಯಂತ್ರೋಪಕರಣಗಳ ಅಳವಡಿಕೆಯ ಒಟ್ಟಾರೆ ಅಂದಾಜು ವೆಚ್ಚ ರೂ.59.80 ಕೋಟಿಗಳು ಮತ್ತು 80 ಕೆ.ಎಲ್.ಪಿ.ಡಿ ಎಥೆನಾಲ್ ಘಟಕದ ಸ್ಥಾಪನೆಯ ಒಟ್ಟಾರೆ ಅಂದಾಜು ವೆಚ್ಚ ರೂ.116.00 ಕೋಟಿಗಳನ್ನು ಸೇರಿ ಒಟ್ಟು ರೂ.175.80 ಕೋಟಿಗಳ ಪ್ರಸ್ತಾವನೆಯನ್ನು ಒಪ್ಪಲು ಮತ್ತು ಇದರಲ್ಲಿ ರೂ.100.00 ಕೋಟಿಗಳ ಸಹಾಯಾನುದಾನವನ್ನು ರಾಜ್ಯ ಸರ್ಕಾರದಿಂದ ಒದಗಿಸಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ನಂತರ ಸಚಿವ ಸಂಪುಟ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.<br>2. OMC / ರಾಷ್ಟ್ರೀಕೃತ ಬ್ಯಾಂಕ್ / ಹಣಕಾಸು ಸಂಸ್ಥೆಗಳಿಂದ ಸಾಲ/ನೆರವು ಪಡೆದು ಉಳಿದ ರೂ.75.80 ಕೋಟಿಗಳ ಸಂಪನ್ಮೂಲವನ್ನು ಕ್ರೋಢೀಕರಿಸಲು ತೀರ್ಮಾನಿಸಲಾಯಿತು.<br>3. ಉಳಿದಂತೆ, ಕಬ್ಬಿನ ಲಭ್ಯತೆಯನ್ನು ಆಧರಿಸಿ, ಹೊಸ ಬಾಯ್ಲರ್ ಘಟಕದ ಸ್ಥಾಪನೆಯ ಪ್ರಸ್ತಾವನೆಯನ್ನು ಮುಂದಿನ ದಿನಗಳಲ್ಲಿ ಪರಿಗಣಿಸುವ ಕುರಿತಂತೆ ಚರ್ಚಿಸಿ, ಪ್ರಸ್ತುತ ವಿಸ್ತೃತ ಯೋಜನಾ ವರದಿಯ Part-B ರಲ್ಲಿನ ಶಿಫಾರಸ್ಸನ್ನು ಮುಂದೂಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.<br><br>ಮೇಲ್ಕಂಡ ಸಭೆಯಲ್ಲಿ, ಹೊಸ ಬಾಯ್ಲರ್ ಘಟಕದ ಸ್ಥಾಪನೆಯ ಪ್ರಸ್ತಾವನೆಯನ್ನು ಮುಂದೂಡಲುತೀರ್ಮಾನಿಸಿರುವುದರಿಂದ ಪ್ರಸ್ತುತ ಕಾರ್ಖಾನೆಯಲ್ಲಿ ಇರುವ 5,000 ಟಿ.ಸಿ.ಡಿ ಸಾಮರ್ಥ್ಯದ ಕಬ್ಬು ನುರಿಸುವ ಘಟಕವನ್ನು ಆಧುನೀಕರಣಗೊಳಿಸುವ ಮತ್ತು ಪ್ರಸ್ತುತ ಕಾರ್ಖಾನೆಯ ಆವರಣದಲ್ಲಿಯೇ 80 ಕೆ.ಎಲ್.ಪಿ.ಡಿ ಎಥೆನಾಲ್ ಘಟಕವನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. |
| (ಆ) | ಮೈಶುಗರ್ ಕಾರ್ಖಾನೆಯಲ್ಲಿ 'ಎಥೆನಾಲ್ ಘಟಕ' ಸ್ಥಾಪನೆ ಕುರಿತು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದ್ದ ಪ್ರಸ್ತಾವನೆಗೆ ಸರ್ಕಾರ ಅನುಮೋದನೆ ನೀಡಿದೆಯೇ; ಇಲ್ಲದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು; | ದಿನಾಂಕ:20.11.2024ರ ಸಭೆಯಲ್ಲಿ ತೀರ್ಮಾನಿಸಿದಂತೆ 5,000 ಟಿ.ಸಿ.ಡಿ ಸಾಮರ್ಥ್ಯದ ಕಬ್ಬು ನುರಿಸುವ ಘಟಕವನ್ನು ಆಧುನೀಕರಣಗೊಳಿಸುವ ಮತ್ತು 80 ಕೆ.ಎಲ್.ಪಿ.ಡಿ ಎಥೆನಾಲ್ ಘಟಕ ಸ್ಥಾಪಿಸುವ ಯೋಜನೆಗೆ ರಾಜ್ಯ ಸರ್ಕಾರದಿಂದ ರೂ.100.00 ಕೋಟಿಗಳ ಆರ್ಥಿಕ ನೆರವನ್ನು ಒದಗಿಸುವ ಮತ್ತು ಉಳಿದ ರೂ.75.80 ಕೋಟಿಗಳನ್ನು ದಿ ಮೈಸೂರು ಷುಗರ್ ಕಂಪನಿಯು OMC / ರಾಷ್ಟ್ರೀಕೃತ ಬ್ಯಾಂಕ್ / ಹಣಕಾಸು ಸಂಸ್ಥೆಗಳಿಂದ ಸಾಲ/ನೆರವು ಪಡೆಯುವ ಪ್ರಸ್ತಾವನೆಯನ್ನು ಸಹಮತಿಗಾಗಿ ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿತ್ತು. ಆರ್ಥಿಕ ಇಲಾಖೆಯು ದಿನಾಂಕ:26.12.2024ರ ಟಿಪ್ಪಣಿಯಲ್ಲಿ, ದಿನಾಂಕ:08.07.2020 ರಂದು ನಡೆದಿದ್ದ ಸಚಿವ ಸಂಪುಟ ಉಪಸಮಿತಿಯ ಶಿಫಾರಸ್ಸಿನ ಮೇರೆಗೆ ಕಬ್ಬು ಅರೆಯುವ ಘಟಕವನ್ನು ಎಲ್.ಆರ್.ಓ.ಟಿ ಆಧಾರದ ಮೇಲೆ ಕಾರ್ಯಗತಗೊಳಿಸಲು ಮತ್ತು ಎಥೆನಾಲ್ ಘಟಕವನ್ನು ಪಿ.ಪಿ.ಪಿ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಅಭಿಪ್ರಾಯಿಸಿರುತ್ತದೆ. ಮುಂದಿನ ಕ್ರಮದ ಬಗ್ಗೆ ಪರಿಶೀಲನೆಯಲ್ಲಿದೆ. |

...3

| | | |
|---|---|---|
| (ಇ) | ಮೈಷುಗರ್ ಕಾರ್ಖಾನೆಯಲ್ಲಿ ಸಹ ವಿದ್ಯುತ್ ಘಟಕ ಕಾರ್ಯಾರಂಭಗೊಂಡ ನಂತರದಿಂದ ಈವರೆವಿಗೂ ಉತ್ಪಾದಿಸಲಾದ ವಿದ್ಯುತ್ ಪ್ರಮಾಣ ಎಷ್ಟು; ಇದರಲ್ಲಿ ಮಾರಾಟ ಮಾಡಲಾದ ವಿದ್ಯುತ್ ಪ್ರಮಾಣ ಹಾಗೂ ಗಳಿಸಿದ ಲಾಭ ಎಷ್ಟು; (ವರ್ಷವಾರು ವಿವರ ನೀಡುವುದು) | ದಿ ಮೈಸೂರು ಷುಗರ್ ಕಂಪನಿಯಲ್ಲಿ 2023-24ರಲ್ಲಿ 12,21,000 ಯೂನಿಟ್‌ನ್ನು ಉತ್ಪಾದಿಸಿ, 4,93,200 ಯೂನಿಟ್‌ಗಳನ್ನು ಚೆಸ್ಕಾಂಗೆ ರಫ್ತು ಮಾಡಲಾಗಿದ್ದು ಇದರ ಮೊತ್ತ ರೂ.29,14,812.00 ಆಗಿರುತ್ತದೆ. 2024-25ನೇ ಸಾಲಿನಲ್ಲಿ 1,57,30,000 ಯೂನಿಟ್ ವಿದ್ಯುತ್ ಉತ್ಪಾದಿಸಿದ್ದು, 71,83,440 ಯೂನಿಟ್ ವಿದ್ಯುತ್ ಅನ್ನು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮಕ್ಕೆ ರಫ್ತು ಮಾಡಲಾಗಿರುತ್ತದೆ. ರಫ್ತು ಮಾಡಿದ 71,83,440 ಯೂನಿಟ್ಗಳ ಮೊತ್ತ ರೂ.4,33,87,977 ಗಳಾಗಿರುತ್ತದೆ. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮಕ್ಕೆ ಪಾವತಿಸಬೇಕಾದ ವಿದ್ಯುತ್ ಬಿಲ್ ಬಾಕಿಗೆ ಈ ಮೊತ್ತವನ್ನು ಹೊಂದಾಣಿಕೆ ಮಾಡಿಕೊಳ್ಳಲಾಗಿರುತ್ತದೆ. |
| (ಈ) | ಮೈಷುಗರ್ ಒಡೆತನದಲ್ಲಿ ಎಷ್ಟು ಎಕರೆ ಭೂಮಿ ಇದೆ; ಈ ಪೈಕಿ ಎಷ್ಟು ಎಕರೆ ಭೂಮಿ ಒತ್ತುವರಿಯಾಗಿದೆ; ಯಾವ್ಯಾವ ಸರ್ವೆ ನಂಬರುಗಳಲ್ಲಿ ಭೂಮಿ ಒತ್ತುವರಿಯಾಗಿದೆ: ಒತ್ತುವರಿ ತೆರವುಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು: | ಮೈಸೂರು ಸಕ್ಕರೆ ಕಂಪನಿಯ ಒಡೆತನದಲ್ಲಿ 235.10 ¼ ಎಕರೆ ಗುಂಟೆ ಜಮೀನಿರುತ್ತದೆ. ಈ ಪೈಕಿ ಎಷ್ಟು ಜಮೀನು ಒತ್ತುವರಿಯಾಗಿರುತ್ತದೆ ಎಂಬ ಬಗ್ಗೆ ಹಾಗೂ ಯಾವ ಸರ್ವೇ ನಂಬರ್‌ಗಳಲ್ಲಿ ಜಮೀನು ಒತ್ತುವರಿಯಾಗಿರುತ್ತದೆ ಎಂಬ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. |
| (ಉ) | ಡಿಸ್ಟಿಲರಿ ಘಟಕವನ್ನು ಮತ್ತೆ ಆರಂಭಿಸಲು ಉದ್ದೇಶಿಸಲಾಗಿದೆಯೇ? | ಮೈಸೂರು ಸಕ್ಕರೆ ಕಂಪನಿಯಲ್ಲಿ ಪ್ರಸ್ತುತ ಇರುವ ಡಿಸ್ಟಿಲರಿ ಘಟಕದ ಟೆಕ್ನಾಲಾಜಿ ಬಹಳ ಹಳೆಯದಾಗಿರುವುದರಿಂದ ಹಾಗೂ ಯಂತ್ರೋಪಕರಣಗಳು ಹಾಳಾಗಿರುವುದರಿಂದ ಸದರಿ ಡಿಸ್ಟಿಲರಿ ಘಟಕವನ್ನು ಪ್ರಸ್ತುತ ಪುನರ್ ಆರಂಭಿಸುವ ಉದ್ದೇಶವಿರುವುದಿಲ್ಲ. |

**ಸಂಖ್ಯೆ :** ಸಿಐ 231 ಸಿಓಎಫ್ 2025

(ಶಿವಾನಂದ ಎಸ್ ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು